# ನೈತಿಕ ಫ್ಯಾಷನ್

## ತಾಳಿಕೆಯ ದಾರಿಯ ಶೋಧನೆ

ಬೆಂಕಿ ಬಿದ್ದಾಗ ಬಾವಿ ತೋಡುವುದು ಮನುಷ್ಯನ ಮೂಲಸ್ವಭಾವ ತಾನೆ? ಫ್ಯಾಷನ್ ಲೋಕದಲ್ಲಿ ಮುಳುಗೆದ್ದವರಲ್ಲಿ ಕೆಲವರಿಗೆ, ಮೇಲೆ ಹೊಳೆಯುತ್ತಿರುವ ವರ್ಚಸ್ಸಿನ ವೇದಿಕೆಯ ಕೆಳಗೆ ಬಿದ್ದಿರುವ ಮಾಲಿನ್ಯದ ಬೆಂಕಿ ಕಾಣಿಸಿದೆ. ಇದನ್ನು ಈಗಲೇ ಆರಿಸದೇ ಹೋದರೆ ಜಗತ್ತನ್ನೇ ಸುಟ್ಟುಹಾಕುವ ಕಾಳ್ಗಿಚ್ಚಾಗುವ ಆತಂಕವನ್ನೂ ಅವರು ಮನಗಂಡಿದ್ದಾರೆ. ಆದರೆ ಕೆಳಗೆ ಸುಡುತ್ತಿರುವ ಅದೇ ವೇದಿಕೆಯ ಮೇಲೆ ಇಹದ ಪರಿವೆಯೇ ಇಲ್ಲದೆ ಮೈಮರೆತು ಮೆರೆಯುತ್ತಿರುವವರಿಗೆ ಇದನ್ನು ತಿಳಿಸಿಹೇಳುವುದು ಹೇಗೆ? ನಿತ್ಯವೂ ಬದಲಾಗುತ್ತಿರುವ ಫ್ಯಾಷನ್ ಟ್ರೆಂಡ್‌ಗಳಿಗೆ ಮಾರುಹೋಗಿರುವ ಯುವ ಪೀಳಿಗೆಯ ಆಮಿಷಗಳಿಗೆ ಆಹಾರ ಒದಗಿಸುತ್ತಲೇ ತಾಳಿಕೆ ಹೊಸ ದಾರಿ ಹುಡುಕಿಕೊಳ್ಳುವ ಬಗೆ ಎಂತು?


ಈ ಪ್ರಶ್ನೆಗಳ ನಿರಂತರ ಜಿಜ್ಞಾಸೆಯ ಫಲವಾಗಿ ಹುಟ್ಟಿಕೊಂಡಿದ್ದೇ 'ಸಸ್ಟನೇಬಲ್ ಫ್ಯಾಷನ್' ಅಥವಾ 'ತಾಳಿಕೆ ಫ್ಯಾಷನ್'. ಇದಕ್ಕೆ 'ನೈತಿಕ ಫ್ಯಾಷನ್', 'ಪರಿಸರಸ್ನೇಹಿ ಫ್ಯಾಷನ್' ಎಂಬ ಹೆಸರುಗಳೂ ಇವೆ. ಫ್ಯಾಷನ್ ಜಗತ್ತಿನ ಮಾಲಿನ್ಯವಿಧ್ವಂಸಗಳ ಪರಿಣಾಮದ ಕುರಿತ ಎಚ್ಚರಿಕೆಯ ಪ್ರಜ್ಞೆಯಾಗಿ ಹುಟ್ಟಿಕೊಂಡಿರುವ ಪರಿಕಲ್ಪನೆಯಿದು. ಇಂದು ಜಗತ್ತಿನಾದ್ಯಂತ ಹಲವು ಜನಪ್ರಿಯ ವಿನ್ಯಾಸಕಾರರು, ಉತ್ಪಾದಕ ಸಂಸ್ಥೆಗಳೂ ಈ ಮಾದರಿಯನ್ನು ಸಾಮಾಜಿಕ ಜವಾಬ್ದಾರಿ ಎಂಬಂತೆ ನಿರ್ವಹಿಸುತ್ತಿದ್ದಾರೆ. ಹೆಚ್ಚು ಹೆಚ್ಚು ಜನಪ್ರಿಯಗೊಳಿಸಲು ಪ್ರಯತ್ನಿಸುತ್ತಿದ್ದಾರೆ.

## ಏನಿದು ನೈತಿಕ ಫ್ಯಾಷನ್?

'ನೈತಿಕ ಫ್ಯಾಷನ್' ಎಂದರೆ ಏನು ಎಂಬುದನ್ನು ಹೇಳಬೇಕಾದರೆ ಆರಂಭದಲ್ಲಿ ಉಲ್ಲೇಖಿಸಿದ ಗಾಂಧೀಜಿ ಮಾತುಗಳನ್ನು ಮತ್ತೊಮ್ಮೆ ನೆನಪಿಸಿಕೊಳ್ಳಬೇಕು. ಅಂದರೆ ಈ ಭೂಮಿಯ ಧಾರಣಶಕ್ತಿಯ ಗಡಿಯೊಳಗಡೆಯೇ ನಮ್ಮ ಅಗತ್ಯ–ಆಸೆಗಳನ್ನು ಪೂರೈಸಿಕೊಳ್ಳುವ, ಆ ಮೂಲಕ ಮುಂದಿನ ಪೀಳಿಗೆಗೂ ಸಂಪನ್ಮೂಲಗಳನ್ನು ಉಳಿಸಿ ಹೋಗುವ ನಿಸರ್ಗಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಪ್ರಯತ್ನವಿದು.

ಬಟ್ಟೆ, ಪಾದರಕ್ಷೆ ಹಾಗೂ ಸೌಂದರ್ಯ ಪರಿಕರಗಳ ತಯಾರಿಕೆಯ ಹಂತದಿಂದ ಹಿಡಿದು ಗ್ರಾಹಕ ಅದನ್ನು ಭರಿಸಿ, ಧರಿಸಿ ಮುಗಿಸುವವರೆಗೂ ಪರಿಸರಸ್ನೇಹಿ ವಿಧಾನವನ್ನು ಅನುಸರಿಸುವುದೇ ಸಸ್ಟನೇಬಲ್ ಫ್ಯಾಷನ್. ಸಂಸ್ಕರಣೆ, ಉತ್ಪಾದನೆಯ ಹಂತವನ್ನು ಪರಿಸರಸ್ನೇಹಿಯಾಗಿಸುವುದರ ಜೊತೆಗೆ ಗುಣಮಟ್ಟವನ್ನೂ ಕಾಯ್ದುಕೊಳ್ಳುವುದು, ಹಾಗೆಯೇ ಗ್ರಾಹಕರ ಅಭಿರುಚಿಯ ಬೇಡಿಕೆಗಳನ್ನೂ ಪೂರೈಸುವುದು ಈ ಪರಿಕಲ್ಪನೆಯ ಗುರಿ. ಪುನರ್‌ಬಳಕೆಯ ಮೂಲಕ ಹೊಸ ಬಟ್ಟೆಗಳ ಉತ್ಪಾದನೆಯ ಮಟ್ಟವನ್ನು ತಗ್ಗಿಸುವುದು. ಆ ಮೂಲಕ ತ್ಯಾಜ್ಯದ ಪ್ರಮಾಣವನ್ನು ಗಣನೀಯ ಪ್ರಮಾಣದಲ್ಲಿ ಇಳಿಸುವುದೂ ಈ ಪರಿಕಲ್ಪನೆಯ ಭಾಗ.

ಉತ್ಪಾದನೆ ಹೆಚ್ಚಿಸುವುದು. ನೈಸರ್ಗಿಕವಾಗಿ ದೊರೆಯುವ ವಸ್ತುಗಳಾದ ಬಿದಿರು, ಸಾವಯವ ಹತ್ತಿ, ರೇಷ್ಮೆ, ಸೆಣಬುಗಳಿಂದ ತಯಾರಿಸಲಾದ ಬಟ್ಟೆಗಳ ಬಳಕೆಯನ್ನು ಹೆಚ್ಚಿಸುವುದು. ನೈಸರ್ಗಿಕ ಸಂಪನ್ಮೂಲಗಳಾದ ನೀರು, ಗಾಳಿ, ಭೂಮಿ, ಪ್ರಾಣಿ, ಗಿಡಮರಗಳನ್ನು ಅತ್ಯಂತ ಕಾಳಜಿಯಿಂದ ಬಳಸುವುದು. ಸೋಲಾರ್, ವಿಂಡ್‌ಮಿಲ್‌ಗಳಿಂದ ಉತ್ಪಾದನೆಯಾದ ಶಕ್ತಿಯನ್ನು ಸಾಧ್ಯವಾದಷ್ಟೂ ಹೆಚ್ಚು ಬಳಸುವುದು – ಹೀಗೆ ಪ್ರತಿ ಹಂತದಲ್ಲಿಯೂ ಪರಿಸರಕ್ಕೆ ಸಾಧ್ಯವಾದಷ್ಟೂ ಪೂರಕವಾಗಿ ಫ್ಯಾಷನ್ ಪರಿಕರಗಳನ್ನು ಉತ್ಪಾದಿಸುವ ದಾರಿಗಳನ್ನು ಸಸ್ಟನೇಬಲ್ ಫ್ಯಾಷನ್ ಪರಿಕಲ್ಪನೆಯಲ್ಲಿ ಜಾರಿಗೆ ತರಲಾಗುತ್ತಿದೆ. ಇದಕ್ಕೆ 'ನೈತಿಕ ಫ್ಯಾಷನ್' ಎನ್ನುವ ಟ್ಯಾಗ್‌ಲೈನ್ ಅನ್ನೂ ಅನೇಕ ಕಂಪನಿಗಳು ಕೊಟ್ಟುಕೊಂಡಿವೆ.



## ಪರಿಕಲ್ಪನೆಯ ಹುಟ್ಟು

ನೈತಿಕ ಫ್ಯಾಷನ್ ಎನ್ನುವುದು ತೀರಾ ನಿನ್ನೆ ಮೊನ್ನೆಯ ಪರಿಕಲ್ಪನೆಯೇನಲ್ಲ. ಪರಿಸರಸ್ನೇಹಿ ಫ್ಯಾಷನ್ ಎನ್ನುವುದು ಮೊದಲ ಬಾರಿಗೆ ಹುಟ್ಟಿಕೊಂಡಿದ್ದು, ಚರ್ಚೆಗೆ ಒಳಗಾಗಿದ್ದು 1940ರಲ್ಲಿ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ.

## ಯಾವುದೆಲ್ಲ ಪರಿಸರಸ್ನೇಹಿ?

ನೈಸರ್ಗಿಕ ವಸ್ತುಗಳು ಹಾಗೂ ಕೃತಕ ವಸ್ತುಗಳಿಂದ ವಿವಿಧ ಬಗೆಯ ಬಟ್ಟೆಗಳನ್ನು ತಯಾರಿಸಲಾಗುತ್ತದೆ. ಅವುಗಳನ್ನು ಸಂಸ್ಕರಿಸುವ ವಿಧಾನದಲ್ಲಿ ಸಾಕಷ್ಟು ರಾಸಾಯನಿಕಗಳು ಬಳಕೆಯಾಗುತ್ತವೆ. ಹೆಚ್ಚು ನೈಸರ್ಗಿಕವಾದ ಬಟ್ಟೆಗಳು ಎಂದರೆ –

- ಉಣ್ಣೆ ಹಾಗೂ ರೇಷ್ಮೆ
- ಹತ್ತಿ, ಅಗಸೆ (ಲಿನೆನ್ ಬಟ್ಟೆ ತಯಾರಿಸಲಾಗುತ್ತದೆ) ಹಾಗೂ ಸೆಣಬಿನಿಂದ ತಯಾರಿಸಿದ ಬಟ್ಟೆಗಳು
- ಖನಿಜಗಳಿಂದ ತಯಾರಿಸಲ್ಪಟ್ಟ ಎಸ್ಬೆಸ್ಟೋಸ್ (ಕಲ್ನಾರು) ಹಾಗೂ ಗ್ಲಾಸ್ ಫೈಬರ್‌ಇವಿಷ್ಟೂ ನೈಸರ್ಗಿಕ ವಿಧಾನವನ್ನನುಸರಿಸಿ ತಯಾರಿಸಿದಂಥವು.
- ನೈಲಾನ್, ಪಾಲಿಸ್ಟರ್ ಹಾಗೂ ಅಕ್ರಿಲಿಕ್ ಬಟ್ಟೆಗಳು ಕೃತಕವಾಗಿ ತಯಾರಿಸಲ್ಪಟ್ಟವು. ಪಾಲಿಯಸ್ಟರ್ ಬಟ್ಟೆಗಳು ಪ್ರಕೃತಿಗೆ ಮಾರಕವಾದದ್ದು. ಇದು ಜೈವಿಕವಾಗಿ ವಿಘಟನೆ ಹೊಂದುವುದಿಲ್ಲ. ಕಡಿಮೆ ಬೆಲೆಯಲ್ಲಿ ಸಿಗುತ್ತದೆ ಎನ್ನುವ ಕಾರಣಕ್ಕೆ ಇತ್ತೀಚಿನ ದಿನಗಳಲ್ಲಿ ಇದರ ಉತ್ಪಾದನೆ ಹಾಗೂ ಬಳಕೆಯ ಪ್ರಮಾಣ ಹೆಚ್ಚಿದೆ.

